# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 615(517)
ಸದಸ್ಯರ ಹೆಸರು : ಶ್ರೀ ಗೋವಿಂದರಾಜು
ಉತ್ತರಿಸುವ ದಿನಾಂಕ : 21.02.2023
ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ ಹಾಗೂ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆ ಸಚಿವರು.

<table>
<tr><th>ಕ್ರ.ಸಂ.</th><th>ವಿಷಯ</th><th>ಉತ್ತರ</th></tr>
<tr><td>ಅ.</td><td>ಕೋಲಾರ ನಗರಸಭೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಹಾಗೂ ಇನ್ನಿತರ ಆಡಳಿತ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಸರ್ಕಾರದಿಂದ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು;</td><td>ಕೋಲಾರ ನಗರಸಭೆಯಲ್ಲಿ ಒಟ್ಟು 418 ಹುದ್ದೆಗಳು ಮಂಜೂರಾಗಿದ್ದು, 90 ಮಂದಿ ಖಾಯಂನೌಕರರು ಹಾಗೂ 207 ಮಂದಿ ಗುತ್ತಿಗೆ, ಹೊರಗುತ್ತಿಗೆ, ದಿನಗೂಲಿ, ನೇರಪಾವತಿ ಮತ್ತು ಇತರೆ ನೌಕರರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.</td></tr>
<tr><td>ಆ.</td><td>ನಗರಸಭೆಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು;</td><td>ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಕರ್ನಾಟಕ ಲೋಕಸೇವಾ ಆಯೋಗದಲ್ಲಿ 534 ಹುದ್ದೆಗಳ ಆಯ್ಕೆ ಪ್ರಕ್ರಿಯೆಯು ಚಾಲ್ತಿಯಲ್ಲಿದ್ದು, ನೇರನೇಮಕಾತಿಯಡಿ ಖಾಲಿ ಇರುವ ಹುದ್ದೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಲೋಕಸೇವಾ ಆಯೋಗದಿಂದ ಅಂತಿಮ ಆಯ್ಕೆಪಟ್ಟಿ ಸ್ವೀಕೃತವಾದ ಕೂಡಲೇ ಆಯ್ಕೆಯಾದ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಪರಿಶೀಲನೆ ಮಾಡಿ, ನೈಜತೆ ಪ್ರಮಾಣ ಪತ್ರವನ್ನಾಧರಿಸಿ ನೇಮಕಾತಿ ಆದೇಶ ನೀಡುವ ಮೂಲಕ ಕೋಲಾರ ನಗರಸಭೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಸಹ ಭರ್ತಿ ಮಾಡಲು ಕ್ರಮವಹಿಸಲಾಗುವುದು.<br><br>ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆರವರ ಅಧಿಸೂಚನೆ ಸಂಖ್ಯೆ ಜಿನಕೋ/ನೇಮಕಾತಿ(ಪೌರಕಾರ್ಮಿಕ)/ಸಿಆರ್/516/2022-23 ದಿ: 17.01.2023 ಹಾಗೂ ಜಿನಕೋ/ಸಿಬ್ಬಂದಿ(ಲೋಡರ್ಸ್ & ಕ್ಲೀನರ್ಸ್)ಸಿಆರ್/02/2022-23 ರನ್ವಯ ಖಾಲಿ ಇರುವ ಪೌರಕಾರ್ಮಿಕರು, ಲೋಡರ್ ಮತ್ತು ಕ್ಲೀನರ್ ಹುದ್ದೆಗಳನ್ನು ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಂದ ಅಧಿಸೂಚನೆ ಹೊರಡಿಸಲಾಗಿದ್ದು. ಇದರಿಂದ ಕೋಲಾರ ನಗರಸಭೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗಿದೆ.</td></tr>
<tr><td>ಇ.</td><td>ನಗರಸಭೆಯಲ್ಲಿ ಕಂದಾಯ ವಸೂಲಿ ಮಾಡುವ ಸಿಬ್ಬಂದಿಗಳು ಇಲ್ಲದಿರುವುದರಿಂದ ಕಂದಾಯ ಸರಿಯಾಗಿ ವಸೂಲಿ ಆಗುತ್ತಿಲ್ಲದಿರುವುದರಿಂದ. ನಗರಸಭೆಯು ಆರ್ಥಿಕವಾಗಿ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಕೋಲಾರ ನಗರಸಭೆಯಲ್ಲಿನ ಕಂದಾಯ ವಿಭಾಗದ ವೃಂದಬಲ ಕೆಳಕಂಡಂತಿದೆ.
<table>
<tr><th>ಹುದ್ದೆಯ ಹೆಸರು</th><th>ಮಂಜೂರಾದ ಹುದ್ದೆಗಳ ಸಂಖ್ಯೆ</th><th>ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ</th><th>ಖಾಲಿ ಹುದ್ದೆಗಳ ಸಂಖ್ಯೆ</th></tr>
<tr><td>ಕಂದಾಯ ಅಧಿಕಾರಿ</td><td>1</td><td>0</td><td>1</td></tr>
<tr><td>ಪ್ರ.ದ.ಕಂ.ನಿ.</td><td>3</td><td>0</td><td>3</td></tr>
</table>
</td></tr>
</table>

<table>
<tr>
<td></td>
<td></td>
<td>
<table>
<tr><td>ಕರವಸೂಲಿ ಗಾರರು</td><td>9</td><td>4</td><td>5</td></tr>
</table>
ಕೋಲಾರ ನಗರಸಭೆಯ 2022-23ನೇ ಸಾಲಿನ ಆಸ್ತಿ ತೆರಿಗೆ ಬೇಡಿಕೆಯು ರೂ.723.82ಲಕ್ಷಗಳಿದ್ದು, ಮೇಲ್ಕಂಡಂತೆ ಹಾಲಿ ಇರುವ ಸಿಬ್ಬಂದಿಗಳಿಂದಲೇ ದಿ:31.01.2023ರವರೆಗೆ ರೂ.418.98ಲಕ್ಷಗಳನ್ನು ವಸೂಲಾತಿ ಮಾಡಲಾಗಿದ್ದು, ಒಟ್ಟಾರೆ ಶೇ.57.88ರಷ್ಟು ತೆರಿಗೆ ವಸೂಲಾತಿಯಾಗಿರುವುದರಿಂದ ನಗರಸಭೆಯು ಆರ್ಥಿಕ ಸಂಕಷ್ಟದಲ್ಲಿರುವುದಿಲ್ಲ.
</td>
</tr>
<tr>
<td>ಈ</td>
<td>ಬಂದಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ಇದುವರೆಗೂ ಯಾವುದಾದರೂ ಕ್ರಮ ತೆಗೆದುಕೋಂಡಿದೆಯೇ? (ಮಾಹಿತಿ ನೀಡುವುದು)</td>
<td>ಪ್ರಶ್ನೆ 'ಇ' ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.</td>
</tr>
</table>

**ಸಂಖ್ಯೆ: ನಅಇ 05 ಎಲ್‌ಸಿಕ್ಯೂ 2023**

(ಎನ್.ನಾಗರಾಜು ಎಂ.ಟಿ.ಬಿ.)
ಪೌರಾಡಳಿತ ಹಾಗೂ ಸಣ್ಣ ಕೈಗಾರಿಕೆ ಮತ್ತು
ಸಾರ್ವಜನಿಕ ಉದ್ದಿಮೆ ಸಚಿವರು